ಶ್ರೀ ಶಿವಾನಂದ ಎಸ್.ಪಾಟೀಲ್ :– ಮಾನ್ಯ ಸಚಿವರಲ್ಲಿ ನನ್ನ ವಿನಂತಿ ಏನೆಂದರೆ, ಮೊದಲು ಹೋಬಳಿ ಕೇಂದ್ರಗಳನ್ನಾಗಿ ಘೋಷಣೆ ಮಾಡಿ ಅನಂತರ ಅವುಗಳನ್ನು ತಾಲ್ಲೂಕು ಕೇಂದ್ರಗಳನ್ನಾಗಿ ಅತಿ ಅವಶ್ಯಕವಾಗಿ ಮಾಡಲೇಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು :– ಮಾಡುತ್ತೇನೆಂದು ಹೇಳಿದ್ದಾರೆ, ಆಯಿತು ಬಿಡಿ.

ಅಧ್ಯಕ್ಷರು:– ಮುಂದಿನ ಗಮನ ಸೆಳೆಯುವ ಸೂಚನೆ ಮಾನ್ಯ ಹೆಚ್. ಡಿ.ರೇವಣ್ಣನವರದು. ಅವರು ಇಲ್ಲ ಆದ್ದರಿಂದ, ಮುಂದಿನದು ಮಾನ್ಯ ಕೆ.ಜಿ.ಬೋಪಯ್ಯನವರದು.

3, ವಿಷಯ :– ಕೊಡಗು ಜಿಲ್ಲೆಯಲ್ಲಿ ಎಲ್ಲಾ ಬಾಣೆ ಜಾಗಗಳಿಗೆ ಕಂದಾಯ ವಿಧಿಸುವಂತೆ ಭೂ ಕಂದಾಯ ಕಾಯ್ದೆ 80 (1) ನ್ನು ತಿದ್ದುಪಡಿ ಮಾಡಿದ್ದರೂ ಇದುವರೆಗೂ ಅನುಷ್ಠಾನಕ್ಕೆ ತಂದಿಲ್ಲದಿರುವ ಬಗ್ಗೆ.

ಶ್ರೀ ಕೆ.ಜಿ.ಬೋಪಯ್ಯ (ವಿರಾಜಪೇಟೆ):– ಕೊಡಗು ಜಿಲ್ಲೆಯ ಎಲ್ಲಾ ಬಾಣೆ ಜಾಗಗಳಿಗೆ ಕಂದಾಯ ವಿಧಿಸುವಂತೆ ಭೂ ಕಂದಾಯ ಕಾಯ್ದೆ 80(1) ಕ್ಕೆ ತಿದ್ದುಪಡಿ ತಂದಿದ್ದರೂ ಇದುವರೆಗೂ ಅನುಷ್ಠಾನಕ್ಕೆ ತಂದಿಲ್ಲದಿರುವ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ವಿ.ಶ್ರೀನಿವಾಸ ಪ್ರಸಾದ್(ಕಂದಾಯ ಸಚಿವರು):– ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿಕೊಟ್ಟಿದ್ದೇನೆ.

ಅದೇನೆಂದರೆ, ಕೊಡಗು ಜಿಲ್ಲೆಯ ಜಮಾ ಬಾಣೆ ಭೂಮಿಗಳಿಗೆ ಕಂದಾಯ ವಿದಿಸುವ ಸಂಬಂಧ ಕಂದಾಯ ನಿಗದಿಪಡಿಸಲು ರೈತರು ಅರ್ಜಿ ಸಲ್ಲಿಸಿದರೆ ನಿಯಮಾನುಸಾರ ಕಂದಾಯ ನಿಗದಿಪಡಿಸುವಂತಹ ಕೆಲಸವನ್ನು ಸಹಾಯಕ ಆಯುಕ್ತರು ನಿರ್ವಹಿಸುತ್ತಿದ್ದಾರೆ. ಭೂ ಕಂದಾಯ ಕಾಯ್ದೆ ಕಲಂ

80 ನ್ನು ನಿಯಮಾನುಸಾರ ಅನುಷ್ಠಾನಗೊಳಿಸಲಾಗುತ್ತಿದೆ. ಸದರಿ ಕಲಂ 80 ಕ್ಕೆ ತಿದ್ದುಪಡಿ ಆದ ನಂತರ 773 ಪ್ರಕರಣಗಳಲ್ಲಿ ಕಂದಾಯ ವಿಧಿಸಲಾಗಿರುತ್ತದೆ.

ಶ್ರೀ ಕೆ.ಜಿ.ಬೋಪಯ್ಯ:– ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಕೊಟ್ಟಿದ್ದಾರೆ . ಇದಕ್ಕೆ ಸಂಬಂಧಪಟ್ಟಂತೆ ಎರಡು ಕ್ಲಾರಿಫಿಕೇಷನ್ ಅನ್ನು ಕೇಳುತ್ತೇನೆ. ರೈತರು ಅರ್ಜಿ ಸಲ್ಲಿಸಿದರೆ ನಿಯಮಾನುಸಾರ ಕಂದಾಯ ನಿಗದಿಪಡಿಸುವಂತಹ ಕೆಲಸವನ್ನು ಸಹಾಯಕ ಆಯುಕ್ತರು ನಿರ್ವಹಿಸುತ್ತಾರೆಂದು ಮತ್ತು ಈಗಾಗಲೇ 773 ಪ್ರಕರಣಗಳಲ್ಲಿ ಕಂದಾಯ ವಿಧಿಸಲಾಗಿದೆ ಎಂದು ಉತ್ತರದಲ್ಲಿ ಹೇಳಿದ್ದಾರೆ. ಆದ್ದರಿಂದ, ಇದು ಇರುವ ನಿಯಮ ಏನೆಂಬುದನ್ನು ಹೇಳಬೇಕು. ಆರ್.ಟಿ.ಸಿ. ಇದ್ದಾಗ Su-motu ಮಾಡಬೇಕೆಂದು ಇದೆ. ಆದ್ದರಿಂದ ಇದಕ್ಕೆ ಬೇರೆ ಏನಾದರೂ ನಿಯಮ ಇದೆಯೇ? ಆರ್.ಟಿ.ಸಿ. ತೆಗೆದುಕೊಂಡು ತಹಸೀಲ್ದಾರ್‌ರವರು ಮಾಡಬೇಕಾಗಿದೆಯಷ್ಟೆ. ಈ ವಿಷಯವನ್ನು ಬೆಳಗಾವಿಯಲ್ಲಿ ನಡೆದ ಅಧಿವೇಶನದಲ್ಲಿ ಹೇಳಿದಾಗ, ಇದನ್ನು ಮಾಡುವುದಕ್ಕೆ ಡೈರಕ್ಷನ್ ಕೊಡುತ್ತೇನೆಂದು ಮಾನ್ಯ ಕಂದಾಯ ಸಚಿವರೇ ಹೇಳಿದ್ದರು, ಆದರೆ, ಇದುವರೆಗೂ ಏನು ಸಹ ಮಾಡಿಲ್ಲ. ಆದ್ದರಿಂದ, ಇದನ್ನು ಯಾವಾಗ ಮಾಡುತ್ತೀರಿ? ಇದಕ್ಕೆ ತಿದ್ದುಪಡಿಯಾಗಿ ಎರಡು ವರ್ಷ ಆಯಿತು, ಹಳೆಯ ಸಿಸ್ಟಮ್‌ನಲ್ಲಿ ಏನಿದೆ ಎಂದರೆ ಅಲ್ಲಿ Cultivation ಮಾಡಿದರೆ ಅದಕ್ಕೆ ಎಸಿಯವರು ಕಂದಾಯ ನಿಗದಿ ಮಾಡುತ್ತಾರೆ. ಆದರೆ, ಈಗ ಅದರ ಅವಶ್ಯಕತೆ ಇಲ್ಲ. ಈಗ cultivated or uncultivated ಇರಲಿ, ಆರ್.ಟಿ.ಸಿ. ತೆಗೆದು ಬಾಣೆ ಜಾಗಗಳಿಗೆ ಕಂದಾಯ ನಿಗದಿ ಮಾಡಬೇಕಷ್ಟೆ.

ಶ್ರೀ ವಿ. ಶ್ರೀನಿವಾಸ ಪ್ರಸಾದ್ :– ಎಲ್ಲಾ ಮಾಡುತ್ತಿದ್ದೇವೆ.

ಶ್ರೀ ಕೆ.ಜಿ.ಬೋಪಯ್ಯ:– ಎಲ್ಲಿ ಮಾಡುತ್ತಿದ್ದೀರಿ? 773 ಪ್ರಕರಣಗಳಲ್ಲಿ ಕಂದಾಯ ನಿಗದಿಪಡಿಸಲಾಗಿದೆ ಎಂದು ಹೇಳಿದ್ದಾರೆ. ಆದರೆ, ಇದು cultivated land ಆಗಿದ್ದರಿಂದ, ಇದನ್ನು ಮಾತ್ರ ಮಾಡುತ್ತಾ ಕುಳಿತಿದ್ದಾರೆ. Cultivated or uncultivated ಇರಲಿ ಆ ಜಾಗಗಳಿಗೆ ಕಂದಾಯ ನಿಗದಿ ಮಾಡಬೇಕು. ಕಲಂ 80ರ ಪ್ರಕಾರ ಇದನ್ನು ಮಾಡುವುದಕ್ಕೆ ತಹಸೀಲ್ದಾರ್ ರವರಿಗೆ ಅಧಿಕಾರ ಇದೆ.

ಅಧ್ಯಕ್ಷರು:– ನನಗೊಂದು ಸಂಶಯ ಇದೆ. ಬಾಣೆ ಜಮೀನುಗಳು Section 79(2) ನಲ್ಲಿ ಬರುತ್ತವೆಯಲ್ಲವೇ?

ಶ್ರೀ ಕೆ.ಜಿ.ಬೋಪಯ್ಯ:– ಮಾನ್ಯ ಅಧ್ಯಕ್ಷರೆ, ಅದು Section80ರ ಅಡಿಯಲ್ಲಿ ಬರುತ್ತವೆ.

ಅಧ್ಯಕ್ಷರು : – Ok

ಕೆ.ಜಿ.ಬೋಪಯ್ಯ:– Section 80ರ ಅಡಿಯಲ್ಲಿ ಬರುತ್ತದೆ. ಇದರ ಪ್ರಕಾರ ಎಲ್ಲ ಭೂಮಿಗಳಿಗೆ ಕಂದಾಯ ನಿಗದಿ ಮಾಡಬೇಕೆಂದು ಇದೆ.

ಶ್ರೀ ವಿ.ಶ್ರೀನಿವಾಸ ಪ್ರಸಾದ್:–ಮಾನ್ಯ ಅಧ್ಯಕ್ಷರೆ, ಬಹಳ specific ಆಗಿ ಉತ್ತರ ಕೊಟ್ಟಿದ್ದೇನೆ. ಈ ಉತ್ತರದಿಂದ ಅವರು ತೃಪ್ತಿಯಾಗದಿದ್ದರೆ ಬೇರೆ ರೀತಿಯ ಉತ್ತರ ಕೊಡುತ್ತೇನೆ ಜಾಗಗಳಿಗೆ ಕಲಂ 80 ರ ಪ್ರಕಾರ ಕಂದಾಯ ವಸೂಲಿ ಮಾಡಬೇಕೆಂದು ಇದೆ. ಈಗಾಗಲೇ Assistant Commissioner ರವರು ಕಂದಾಯವನ್ನು ವಸೂಲಿ ಮಾಡುತ್ತಿದ್ದಾರೆ. ನಮ್ಮ ಜಾಗವನ್ನು ಕಂದಾಯ ಜಾಗಕ್ಕೆ ಸೇರಿಸಿ ನಮ್ಮಿಂದ ಕಂದಾಯ ವಸೂಲಿ ಮಾಡಿ ಎಂದು ಯಾರು ಬಂದು ಅರ್ಜಿ ಕೊಡುತ್ತಾರೆಯೋ ಅಂಥ ಅರ್ಜಿಗಳನ್ನು ನಾವು ನಿಯಮಾನುಸಾರ ಅನುಷ್ಠಾನಗೊಳಿಸಿದ್ದೇವೆ. ಈಗಾಗಲೇ 773 ಪ್ರಕರಣಗಳಲ್ಲಿ

ಕಂದಾಯ ವಿಧಿಸಲಾಗಿರುತ್ತದೆ. ಮತ್ತೆ ಯಾರು ಅರ್ಜಿ ಕೊಡುತ್ತಾರೆಯೋ ಅಂಥವುಗಳನ್ನೂ ಸಹ ಪರಿಗಣಿಸಲಾಗುತ್ತದೆ.

ಅಧ್ಯಕ್ಷರು:– ಇದಕ್ಕೆ ಅರ್ಜಿ ಕೊಡುವ ಪ್ರಶ್ನೆಯೇ ಇಲ್ಲ.

ಶ್ರೀ ಕೆ. ಜಿ.ಬೋಪಯ್ಯ :– ಮಾನ್ಯ ಅಧ್ಯಕ್ಷರೆ, ಹಿಂದೆ, ಏನು ನಿಯಮ ಇತ್ತೆಂದರೆ, ನಾನು cultivation ಮಾಡಿದ್ದೇನೆ, ಆದ್ದರಿಂದ, ಕಂದಾಯ ನಿಗದಿ ಮಾಡಿಕೊಡಿ ಎಂದು ಅರ್ಜಿ ಕೊಡಬೇಕಾಗಿತ್ತು. ಆದರೆ, ಈಗ ತಿದ್ದುಪಡಿಯಾದ ನಂತರ ಆರ್.ಟಿ.ಸಿ, ನೋಡಿ ಕಂದಾಯ ನಿಗದಿ ಮಾಡಬಹುದಾಗಿದೆ. ಇದನ್ನು ತಹಸೀಲ್ದಾರ್‌ರವರು ಮಾಡಬೇಕು. ಈ ವಿಷಯವನ್ನು ನಾನು ಬೆಳಗಾಂ. ಅಧಿವೇಶನದಲ್ಲಿ ಕೂಡ ಹೇಳಿದ್ದೇನೆ.

ಅಧ್ಯಕ್ಷರು:– ಮಾನ್ಯ ಮಂತ್ರಿಗಳೇ, ಈ ಬಗ್ಗೆ ಹೇಳುವುದೇನೆಂದರೆ, ಇದರ ಬಗ್ಗೆ ಒಂದು ಸಾರಿ ತೀರ್ಮಾನವಾದ ಮೇಲೆ ಅರ್ಜಿಗೋಸ್ಕರ ಕಾಯಬೇಕಾದ ಅವಶ್ಯಕತೆ ಇಲ್ಲ. ಎಷ್ಟು ಎಕರೆ ಅದರಲ್ಲಿ ಕವರ್ ಆಗಿದೆಯೋ ಅಷ್ಟಕ್ಕೆ uniform ಆಗಿ ಕಂದಾಯ ನಿಗದಿ ಮಾಡಲಾಗುತ್ತದೆಂದು ಹೇಳಿದರೆ ಆಯಿತು. ಮತ್ತೆ ಈ ಸಮಸ್ಯೆ ಬರುವುದಿಲ್ಲ.

ಶ್ರೀ ವಿ. ಶ್ರೀನಿವಾಸ ಪ್ರಸಾದ್:– ಆಯಿತು.

ಶ್ರೀ ಕೆ.ಜಿ.ಬೋಪಯ್ಯ:– ಎಷ್ಟು ಅವಧಿಯಲ್ಲಿ ಮಾಡಲಾಗುತ್ತದೆಂದು ಹೇಳಬೇಕು.

ಶ್ರೀ ವಿ.ಶ್ರೀನಿವಾಸ ಪ್ರಸಾದ್:– ಮಾಡುತ್ತೇವೆಂದು ಹೇಳಿದ್ದೇವೆ.

ಅಧ್ಯಕ್ಷರು:– ಸ್ವಲ್ಪ ಕಾಲಾವಕಾಶ ಕೊಡಿ. ಮಾಡಿಕೊಡುತ್ತೇನೆಂದು ಅವರು ಒಪ್ಪಿಕೊಂಡಿದ್ದಾರೆ.

ಶ್ರೀ ಕೆ.ಜಿ.ಬೋಪಯ್ಯ:– ಈಗ ಆ ಜಾಗಗಳ ಮೇಲೆ ಸಾಲವನ್ನು ತೆಗೆದುಕೊಳ್ಳುವುದಕ್ಕೆ ಆಗುತ್ತಿಲ್ಲ. ನಿಮ್ಮ ಬ್ಯಾಂಕ್‌ನವರು ಸಾಲ ಕೊಡುವುದಕ್ಕೆ ಏನು ಉತ್ತರ ಹೇಳುತ್ತಿದ್ದಾರೆಂದು ಸ್ವಲ್ಪ ತಿಳಿದುಕೊಳ್ಳಿ.

ಅಧ್ಯಕ್ಷರು:– ಮಾಡುತ್ತೇನೆಂದು ಹೇಳಿದ್ದಾರೆ. ಆದ್ದರಿಂದ, ಇಲ್ಲಿಗೆ ಬಿಡಿ.

4. ವಿಷಯ:– ಹಾಸನ ಜಿಲ್ಲೆ ಸಕಲೇಶಪುರ ಮತ್ತು ಆಲೂರು ತಾಲ್ಲೂಕುಗಳಲ್ಲಿ ಮತ್ತೆ ಕಾಡಾನೆಗಳ ದಾಳಿ ಹೆಚ್ಚಾಗಿದ್ದು, ಬೆಳೆ ನಷ್ಟವಾಗುತ್ತಿರುವುದಲ್ಲದೇ ಇತ್ತೀಚೆಗೆ 03 ಜನ ಮೃತಪಟ್ಟಿದ್ದು, ಆನೆಗಳನ್ನು ಸಾಮೂಹಿಕವಾಗಿ ಹಿಡಿಯಲು ಜನವರಿಯಿಂದ ಕಾರ್ಯಾಚರಣೆ ಪ್ರಾರಂಭಿಸುವುದಾಗಿ ಸರ್ಕಾರ ಹೇಳಿದ್ದರೂ ಸಹ ಈವರೆವಿಗೂ ಕ್ರಮ ಕೈಗೊಳ್ಳದಿರುವುದರಿಂದ ಜನಸಾಮಾನ್ಯರಿಗೆ ತೊಂದರೆಯಾಗುತ್ತಿರುವುದರ ಬಗ್ಗೆ

ಶ್ರೀ ಎಚ್.ಕೆ.ಕುಮಾರಸ್ವಾಮಿ (ಸಕಲೇಶಪುರ):– ಹಾಸನ ಜಿಲ್ಲೆ ಸಕಲೇಶಪುರ ಮತ್ತು ಆಲೂರು ತಾಲ್ಲೂಕುಗಳಲ್ಲಿ ಮತ್ತೆ ಕಾಡಾನೆಗಳ ದಾಳಿ ಹೆಚ್ಚಾಗಿದ್ದು, ಬೆಳೆ ನಷ್ಟವಾಗುತ್ತಿರುವುದಲ್ಲದೇ ಇತ್ತೀಚೆಗೆ ಮೂರು ಜನ ಮೃತಪಟ್ಟಿದ್ದು, ಆನೆಗಳನ್ನು ಸಾಮೂಹಿಕವಾಗಿ ಹಿಡಿಯಲು ಜನವರಿಯಿಂದ ಕಾರ್ಯಾಚರಣೆ ಪ್ರಾರಂಭಿಸುವುದಾಗಿ ಸರ್ಕಾರ ಹೇಳಿದ್ದರೂ ಸಹ ಈವರೆವಿಗೂ ಕ್ರಮ ಕೈಗೊಳ್ಳದಿರುವುದರಿಂದ ಜನಸಾಮಾನ್ಯರಿಗೆ ತೊಂದರೆಯಾಗುತ್ತಿರುವ ಬಗ್ಗೆ ಮಾನ್ಯ ಅರಣ್ಯ ಸಚಿವರ ಗಮನ ಸೆಳೆಯಬಯಸುತ್ತೇನೆ.

ಶ್ರೀ ಬಿ.ರಮಾನಾಥ ರೈ(ಅರಣ್ಯ ಪರಿಸರ ಮತ್ತು ಜೀವಶಾಸ್ತ್ರ ಸಚಿವರು):– ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿಕೊಟ್ಟಿದ್ದೇನೆ. ಮಾನ್ಯ ಉಚ್ಚ